ಸಂದರ್ಭದಲ್ಲಿ, ತೊಂದರೆ ಎನಿಸಿದರೆ ಏನು ಮಾಡಬೇಕು ಎಂಬುದನ್ನೂ ವಿವರಿಸಬೇಕು.

### ಮೂರು ನಿಯಮಗಳು

ಒಳಉಡುಪು ನಿಯಮ: ಒಳಉಡುಪು ಮುಚ್ಚುವ ದೇಹದ ಲೈಂಗಿಕ ಭಾಗಗಳು (ಯೋನಿ, ಶಿಶ್ನ, ಪೃಷ್ಠ ಮತ್ತು ಎದೆ) ಯಾರೇ ಆಗಲಿ ಮುಜುಗರವಾಗುವಂತೆ ಮುಟ್ಟುವುದು ಸುರಕ್ಷಿತವಲ್ಲ ಎಂಬುದು ಮಕ್ಕಳಿಗೆ ತಿಳಿಯಬೇಕು.

'ಬೇಡ' ಎನ್ನಿ ನಿಯಮ: ಮುಜುಗರವಾಗುತ್ತಿದೆ, ಸರಿಯಿಲ್ಲ ಎನಿಸಿದಾಗ ಇಷ್ಟ ಇಲ್ಲ, ಹಾಗೆ ಮಾಡಬೇಡಿ, 'ಬೇಡ, ಬಿಡು' ಎಂದು ಜೋರಾಗಿ ಹೇಳುವ ಹಕ್ಕು ಮಗುವಿಗಿದೆ. ಇದನ್ನು ಮಕ್ಕಳಿಗೆ ಹಿರಿಯರು ಹೇಳಿಕೊಡಬೇಕು.

ಬೇರೆಯವರಿಗೆ ಹೇಳಿ ನಿಯಮ: ಯಾರಾದರೂ ಮಕ್ಕಳನ್ನು ಅಸುರಕ್ಷಿತವಾಗಿ ಮುಟ್ಟಿದರೆ, ಬಲವಂತಪಡಿಸಿದರೆ ತಕ್ಷಣ ಮಕ್ಕಳು ತಾವು ನಂಬಬಹುದಾದ ದೊಡ್ಡವರಿಗೆ ಹೇಳಬೇಕು.

### ಪಠ್ಯದಲ್ಲಿ ಲೈಂಗಿಕ ಶಿಕ್ಷಣ ಯಾಕೆ?

ಪಠ್ಯ ಮತ್ತು ಸಹ ಪಠ್ಯ: ಮಕ್ಕಳಿಗೆ ಕಲಿಕೆಯ ವಾತಾವರಣ ಇರುವುದು ಶಾಲೆಗಳಲ್ಲಿ. ಸಾಮಾನ್ಯವಾಗಿ ಪೋಷಕರಿಗೆ ಲೈಂಗಿಕತೆ, ಲೈಂಗಿಕ ಅಂಗಗಳನ್ನು ಕುರಿತು ಸಹಜವಾಗಿ ಮಾತನಾಡುವುದು, ಮಕ್ಕಳಿಗೆ ತಿಳಿಸುವ ಕ್ರಮ ತಿಳಿದಿರುವುದಿಲ್ಲ ಅಥವಾ ಅವುಗಳನ್ನು ಕುರಿತು ಮಾತನಾಡಲು ಅವರಿಗೇ ಮುಜುಗರವಾಗುತ್ತದೆ. ಶಾಲೆಗಳಲ್ಲಿ ಪಠ್ಯ ಮತ್ತು ಸಹಪಠ್ಯ ಚಟುವಟಿಕೆಗಳಲ್ಲಿ ದೇಹ, ಆಹಾರ, ಆರೋಗ್ಯ, ಸಾಮಾಜಿಕ ನಡವಳಿಕೆ, ರಕ್ಷಣೆ, ಎಚ್ಚರಿಕೆ ವಿಚಾರಗಳೊಡನೆ ಲೈಂಗಿಕ ಶಿಕ್ಷಣವನ್ನು ಅಂತರ್ಗತಗೊಳಿಸಲೇಬೇಕು. ಕರ್ನಾಟಕ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ 2021ರಲ್ಲಿ ನಡೆಸಿರುವ ಸಮೀಕ್ಷೆ ಶೇ.7.2% ಪೋಷಕರು 'ಇದೆಲ್ಲ ಕೆಟ್ಟ ವಿಷಯ, ಮಕ್ಕಳಿಗೆ ಹೇಳಬಾರದು' ಎಂಬ ನಿಲುವಿರುವುದನ್ನು ಗುರುತಿಸಿದೆ. ಹೀಗಾಗಿ ಶಾಲೆಯಲ್ಲಿ ಲೈಂಗಿಕ ಶಿಕ್ಷಣ ವಿಚಾರ ಮಕ್ಕಳೊಂದಿಗೆ ಮಾತನಾಡದಿದ್ದರೆ ಬೇರೆ ಯಾರೂ ಆರೋಗ್ಯಕರವಾಗಿ ಹೇಳಿಕೊಡುವುದಿಲ್ಲ.

ತಡೆ ಸಾಧ್ಯ: UNICEFನ ಪ್ರಕಾರ ಸುರಕ್ಷಿತ ಮತ್ತು ಅಸುರಕ್ಷಿತ ಸ್ಪರ್ಶ ಕುರಿತು ಅರಿತುಕೊಂಡ 6ರಿಂದ 8 ವರ್ಷದೊಳಗಿನ ಮಕ್ಕಳು ಶೋಷಣೆಯ ಅನುಭವಕ್ಕೆ ಬಂದಲ್ಲಿ, ಅವರಲ್ಲಿ ಶೇ.80 ಮಕ್ಕಳು ತಡ ಮಾಡದೆ ಅದರ ಬಗ್ಗೆ ಪೋಷಕರ ಬಳಿ ಹೇಳಿಕೊಳ್ಳುತ್ತಾರೆ. ಇಲ್ಲಿನ ಪ್ರಮುಖ ಅಂಶ ತಡೆಯಲು ಸಾಧ್ಯ ಎನ್ನುವ ನಂಬಿಕೆ. ಮಕ್ಕಳು ಇಲ್ಲದ್ದೆಲ್ಲಾ ಹೇಳುತ್ತಾರೆ, ಏನೇನೋ ಕಲ್ಪಿಸಿಕೊಳ್ಳುತ್ತಾರೆ ಎನ್ನುವ ವರ್ಗ ಇದ್ದರೂ, ಪರಿಶೀಲನೆಗಳಲ್ಲಿ ಕಂಡುಬಂದಿರುವುದು ಮಕ್ಕಳು ಸುಳ್ಳು ಆರೋಪಗಳನ್ನು ಮಾಡುವುದಿಲ್ಲ ಎನ್ನುವುದು. ಹೀಗೆ ಸುಳ್ಳು ಸಮಜಾಯಿಶಿ ಕೊಡುವವರು ತಮ್ಮ ಅಪರಾಧವನ್ನು ಮುಚ್ಚಿಕೊಳ್ಳಲೇ ಮಾಡುತ್ತಾರೆ.

ಪೋಕ್ಸೊ ಕಾಯ್ದೆ 2012 ಕುರಿತು ಶಾಲೆಗಳಲ್ಲಿ ಜಾಗೃತಿ: ಕಾಯಿದೆಯ ಜಾರಿ ಬದ್ಧತೆಯ ಒಂದು ಪ್ರಮುಖ ಅಂಶ, ಪಾಕ್ಸೋ ಕುರಿತು ವಯಸ್ಕರಲ್ಲದೆ, ಎಲ್ಲಾ ಮಕ್ಕಳಿಗೂ ಶಾಲಾ ಮಟ್ಟದಲ್ಲಿಯೇ ಮಾಹಿತಿಯನ್ನು ವೈಜ್ಞಾನಿಕವಾಗಿ ತಲುಪಿಸುವುದು.

### ಉಚ್ಚ ನ್ಯಾಯಾಲಯದ ನಿರ್ದೇಶನ

ಉತ್ತರ ಕನ್ನಡ ಜಿಲ್ಲೆಯಲ್ಲಿನ ಹದಿವಯಸ್ಕ ಬಾಲಕ ಬಾಲಕಿಯರ ಒಂದು ಜೋಡಿ ಕಣ್ಮರೆಯಾಗಿದ್ದರು (2015). ಪೊಲೀಸ್ ಪ್ರಕರಣ ದಾಖಲಾಗಿತ್ತು. ಹುಡುಕುವ ಯತ್ನಗಳಿಗೆ ಫಲ ಸಿಕ್ಕಿರಲಿಲ್ಲ. ಎರಡು ವರ್ಷಗಳ ನಂತರ ಹಸುಗೂಸುವಿನೊಡನೆ ಅವರು ಹಿಂದಿರುಗಿದರು. ಪ್ರಕರಣ ಸ್ಥಳೀಯ ನ್ಯಾಯಾಲಯದ ಹಂತದಿಂದ ಧಾರವಾಡ ಉಚ್ಚ ನ್ಯಾಯಾಲಯಕ್ಕೆ ತಲುಪಿತ್ತು. ಪ್ರಕರಣವನ್ನು ವಿಲೇವಾರಿ ಮಾಡುವಾಗ ನ್ಯಾಯಾಲಯ ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆಗೆ ಈ ಮುಂದಿನಂತೆ ಕಡ್ಡಾಯ ನಿರ್ದೇಶನ ನೀಡಿತು (2022). 'ಪೋಕ್ಸೊ ಕಾಯಿದೆ ಹಾಗೂ ಇದಕ್ಕೆ ಸಂಬಂಧಿಸಿದಂತೆ ದೇಶದ ಇತರ ಕಾಯಿದೆಗಳಲ್ಲಿ ಯಾವ ಯಾವ ಕೃತ್ಯಗಳನ್ನು ಶಿಕ್ಷಾರ್ಹ ಎಂದು ಪರಿಗಣಿಸಿದೆಯೋ ಅಂತಹ ವಿಚಾರಗಳನ್ನು ಮುಖ್ಯವಾಗಿ 9ನೇ ತರಗತಿಯಿಂದ ಆರಂಭಿಸಿ 12ನೇ ತರಗತಿಯವರೆಗಿನ ಎಲ್ಲ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಬೇಕು. ಪೋಕ್ಸೊ ಕಾಯಿದೆ, ಲೈಂಗಿಕ ಶೋಷಣೆ, ಹಾಗೂ ಅದರ ಪರಿಣಾಮಗಳನ್ನು ಕುರಿತು ಶಿಕ್ಷಣ ಸಾಮಗ್ರಿಗಳನ್ನು ಸಿದ್ಧಪಡಿಸಲು ಸಮಿತಿಯೊಂದನ್ನು ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ರಚಿಸಬೇಕು. ಅಂತಹ ಸಾಮಗ್ರಿ ಬಳಸಿ ಸರ್ಕಾರದ ಮತ್ತು ಸರ್ಕಾರೇತರ ಶಾಲೆಗಳಲ್ಲಿ



## ಪೋಷಕರು ಮತ್ತು ಮುಖ್ಯಸ್ಥರ ಮನಸ್ಥಿತಿ ಬದಲಾಗಬೇಕು-ಹೇಗೆ?

ಬಹುತೇಕರು ಭಾವಿಸುವುದು ನಮ್ಮ ಕುಟುಂಬದಲ್ಲಿ, ನಮ್ಮ ಸಂಸ್ಥೆ, ಶಾಲೆಯಲ್ಲಿ ಇಂತಹದು ಆಗುವುದಿಲ್ಲ. ನಮ್ಮ ಮಕ್ಕಳ ಮೇಲೆ ಲೈಂಗಿಕ ಶೋಷಣೆಯ ಸಾಧ್ಯತೆ ಇಲ್ಲವೇ ಇಲ್ಲ ಎಂದು ನಂಬಿರುವುದು. ಜೊತೆಗೆ ಇಂತಹ ಪ್ರಕರಣಗಳು ಆದಾಗ, ಅವು ಸಾರ್ವಜನಿಕರ ಗಮನಕ್ಕೆ ಬಂದರೆ 'ನಮ್ಮ ಹೆಸರು ಕೆಡುತ್ತದೆ, ಹೆಣ್ಣುಮಕ್ಕಳಿಗೆ ಮದುವೆ ಆಗುವುದು ಕಷ್ಟವಾಗುತ್ತದೆ!' ಈ ಮನಸ್ಥಿತಿಯಿಂದ ಜನ ಹೊರಬರಲೇಬೇಕು. ಇಲ್ಲವಾದರೆ ಶೋಷಕರು ಯಾವುದೇ ಭಯವಿಲ್ಲದೆ ಇನ್ನಷ್ಟು ಮಕ್ಕಳನ್ನು ಶೋಷಿಸುವ ಸಾಧ್ಯತೆ ಇರುತ್ತದೆ. ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿ ಸಂಬಂಧಿಯೊಬ್ಬರಿಂದ ಶೋಷಣೆಗೆ ಗುರಿಯಾದ 14 ವರ್ಷದ ಬಾಲಕಿ ಗರ್ಭಿಣಿಯಾದಳು. ಪೋಷಕರು ಆರೋಪಿಯೊಡನೆ ರಾಜಿ ಮಾಡಿಕೊಳ್ಳುವ, ಮದುವೆ ಮಾಡಿಬಿಡುವ ಯೋಜನೆಯಲ್ಲಿದ್ದರು. ವಿಚಾರ ತಿಳಿದ ಆರೋಗ್ಯ ಕಾರ್ಯಕರ್ತೆ ಕೊಟ್ಟ ದೂರು ಆರೋಪಿಗಳ ಮೇಲೆ ಪ್ರಕರಣ ಹೂಡುವಂತಾಯಿತು. ಆಪ್ತಸಮಾಲೋಚನೆಯಲ್ಲಿ ಬಾಲಕಿ ಹೇಳಿದ್ದು, ತನ್ನ ಕುಟುಂಬದಲ್ಲಿ ಯಾರೂ ಸಹಾಯಕ್ಕೆ ಬರಲಿಲ್ಲ, ಹೆದರಿಸಿದರು, ಅವರ ಮಾತಿನಂತೆ ನಡೆದುಕೊಳ್ಳಬೇಕು ಇಲ್ಲವೇ ಸಾಯಬೇಕಿತ್ತಷ್ಟೆ.

ಶಾಲೆಗಳಲ್ಲಿ ಪೋಷಕರ ಸಭೆ, ಅಂಗನವಾಡಿಗಳಲ್ಲಿ ಸಲಹಾ ಸಮಿತಿಯ ಸಭೆ, ವಿವಿಧ ಸಂಘಟನೆಗಳಲ್ಲಿ ತಜ್ಞರು, ವೈದ್ಯರು, ವಕೀಲರನ್ನು ಕರೆಯಿಸಿ ಮಕ್ಕಳ ರಕ್ಷಣೆಯ ಹಿನ್ನೆಲೆಯಲ್ಲಿ ಪೋಕ್ಸೊ ಕಾಯಿದೆಯ ವಿಚಾರಗಳು ಮತ್ತು ಮಕ್ಕಳ ಮಾತನ್ನು ಆಲಿಸುವ ಸಂಬಂಧ ಮಾಹಿತಿ ಕೊಡಿಸುವ ಏರ್ಪಾಟು ಆಗಬೇಕು.

ಇದಕ್ಕೆ ಸಹಾಯ ಮಮಾಡಲು ಚೈಲ್ಡ್‌ಲೈನ್ ಇಂಡಿಯಾ ಫೌಂಡೇಷನ್ 'ಕೋಮಲ್' ಶೀರ್ಷಿಕೆಯಡಿ ಮಕ್ಕಳ ಲೈಂಗಿಕ ಶೋಷಣೆ ತಡೆ ಕುರಿತು ಸಿದ್ಧಪಡಿಸಿರುವ ಕಾರ್ಟೂನ್ ಕಿರುಚಿತ್ರ ಯೂಟ್ಯೂಬಿನಲ್ಲಿದೆ [ https://youtu.be/VkY0xqtw6W8 ].